# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 43 / 2024

**ಚಾಸಾ ಃ- 07 / ಪ್ರಾಸಾ ಃ- 04**

| | |
|---|---|
| ಹೆಸರು | **ಡಾಃ ರಫೀಕ್ ಅಹಮದ್ ಖಾನ್** |
| ತಂದೆಯ ಹೆಸರು | **ಅಮೀರ್ ಖಾನ್** |
| ವಯಸ್ಸು | **57 ವರ್ಷ** |
| ಉದ್ಯೋಗ | **ವೈದ್ಯಾಧಿಕಾರಿಗಳು, ಮಾಗಡಿ ಸರ್ಕಾರಿ ಆಸ್ಪತ್ರೆ** |
| ವಿಳಾಸ | **ಬೆಂಗಳೂರು** |

**ದಿನಾಂಕಃ 22.01.2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

2015 ನೇ ಇಸವಿಯಿಂದ ಮಾಗಡಿ ಸರ್ಕಾರಿ ಆಸ್ಪತ್ರೆಯಲ್ಲಿ ಹಿರಿಯ ವೈದ್ಯಾಧಿಕಾರಿ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 10.11.2023 ರಂದು ಸುಮಾರು ಸಂಜೆ 5.50 ರ ಸಮಯದಲ್ಲಿ ನಾನು ಕರ್ತವ್ಯದಲ್ಲಿ ಇದ್ದಾಗ ಸೋಮಯ್ಯ ಬಿನ್ ಕೆಂಪಯ್ಯ , 58 ವರ್ಷ, ವಾಸಃ ಎಸ್.ಬ್ಯಾಡರಹಳ್ಳಿ , ಮಾಗಡಿ ತಾಲ್ಲೂಕುಇವರು ಗಲಾಟೆಯಲ್ಲಿ ಗಾಯವಾಗಿರುತ್ತದೆ ಎಂದು ಚಿಕಿತ್ಸೆಗಾಗಿ ಬಂದಿದ್ದು, ಸದರಿಯವರನ್ನು ವೈದ್ಯಕೀಯ ತಪಾಸಣೆ ಮಾಡಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ. ಸದರಿಯವರ 1. ಎಡಭುಜದ ಮೇಲೆ ನೋವು, 2. ತಲೆಯ ಹಿಂಭಾಗ ನೋವು ಇರುವುದು ಕಂಡುಬಂದಿರುತ್ತವೆ.

ನನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಈಗ ಸಾಕ್ಷಿಗೆ ಗಾಯದ ಪ್ರಮಾಣಪತ್ರವನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಗಾಯದ ಪ್ರಮಾಣಪತ್ರವನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ದಿನಾಂಕಃ 10.11.2023 ರಂದು ಸುಮಾರು ಸಂಜೆ 6.00 ರ ಸಮಯದಲ್ಲಿ ನಾನು ಕರ್ತವ್ಯದಲ್ಲಿ ಇದ್ದಾಗ ಶಾಂತಮ್ಮ ಕೋಂ ಸೋಮಯ್ಯ, 48 ವರ್ಷ, ವಾಸಃ ಎಸ್.ಬ್ಯಾಡರಹಳ್ಳಿ , ಮಾಗಡಿ ತಾಲ್ಲೂಕುಇವರು ಗಲಾಟೆಯಲ್ಲಿ ಗಾಯವಾಗಿರುತ್ತದೆ ಎಂದು ಚಿಕಿತ್ಸೆಗಾಗಿ ಬಂದಿದ್ದು, ಸದರಿಯವರನ್ನು ವೈದ್ಯಕೀಯ ತಪಾಸಣೆ ಮಾಡಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ. ಸದರಿಯವರ 1. ತಲೆ ಮೇಲೆ ನೋವು ಇರುವುದು ಕಂಡುಬಂದಿರುತ್ತವೆ.

ನನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ ಗಾಯವು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಈಗ ಸಾಕ್ಷಿಗೆ ಗಾಯದ ಪ್ರಮಾಣಪತ್ರವನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಗಾಯದ ಪ್ರಮಾಣಪತ್ರವನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ನಿಪಿ-3 ಮತ್ತು 4 ರಲ್ಲಿ ನಮೂದಿಸಿರುವ ಗಾಯದ ಸ್ವರೂಪಗಳು ಗೊದ್ದವೊಟ್ಟೆಯಲ್ಲಿ ಹಲ್ಲೆ ಮಾಡಿದರೆ ಆಗುವ ಸಂಭವ ಇರುತ್ತದೆ.

**ಪಾಟೀ ಸವಾಲು ಃ- ಶ್ರೀ. ಹೆಚ್ ಎನ್ ಎಸ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಯಾರು ಹಲ್ಲೆ ಮಾಡಿರುತ್ತಾರೆ ಎಂಬ ವಿಷಯವನ್ನು ನಿಮಗೆ ಹೇಳಿ ಬರೆಸಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ 1 ಮತ್ತು 2 ರವರನ್ನು ಯಾರು ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದಿರುತ್ತಾರೆ ಎಂದೂ ಸಹ ಬರೆದಿರುವುದಿಲ್ಲ ಎಂದರೆ ಸಾಕ್ಷಿ ಚಾಸ 1 ಮತ್ತು 2 ರವರೆ ಬಂದಿದ್ದರು ಎಂದು ನುಡಿಯುತ್ತಾರೆ. ನಿಪಿ-3 ಮತ್ತು 4 ರಲ್ಲಿ Age of injuries ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಿನಾಂಕ 27.09.2023 ರಂದು ಗಲಾಟೆ ಆಗಿತ್ತು ಎಂದು ಹೇಳಿರುವ ವಿಚಾರ ನಿಮಗೆ ಹೇಳಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಒರಟಾದ ನೆಲದ ಮೇಲೆ ಬಿದ್ದರೆ ನಿಪಿ-3 ಮತ್ತು 4 ರಲ್ಲಿ ನಮೂದಿಸಿರುವ ಗಾಯಗಳು ಆಗುವ ಸಾಧ್ಯತೆ ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-3 ಮತ್ತು 4 ರಲ್ಲಿ ಚಾಸಾ 1 ರವರು ಹೊರರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೋ ಅಥವ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೋ ಎಂದು ನಮೂದು

ಮಾಡಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-3 ಮತ್ತು 4 ರಲ್ಲಿ ಇಂಥಹ ವಸ್ತುಗಳಿಂದಲೇ ಹಲ್ಲೆ ಮಾಡಿರುತ್ತಾರೆ ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಎಷ್ಟು ಗಂಟೆಗೆ ಚಿಕಿತ್ಸೆ ಪ್ರಾರಂಭಿಸಿ ಎಷ್ಟು ಗಂಟೆಗೆ ಚಿಕಿತ್ಸೆ ಮುಗಿಸಿರುತ್ತೇನೆ ಎಂದೂ ಸಹ ನಿಪಿ-3 ಮತ್ತು 4 ರಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಿನಾಂಕ 27.08.2023 ರಂದು 10.11.2023 ರ ವರೆಗಿನ ಗಾಯದ age of injuriy ಹೇಳಬೇಕಾಗುತ್ತದೆ ಎಂದರೆ ಸಾಕ್ಷಿ ನಿಖರವಾಗಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾ 1 ಮತ್ತು 2 ರವರ ಪ್ರಭಾವಕ್ಕೆ ಒಳಗಾಗಿ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಗಾಯದ ಪ್ರಮಾಣಪತ್ರಗಳನ್ನು ನೀಡಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**

**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 43 / 2024**

**ಚಾಸಾ ಃ- 05 / ಪ್ರಾಸಾ ಃ- 05**

| | |
|---|---|
| ಹೆಸರು | **ದೇವರಾಜು** |
| ತಂದೆಯ ಹೆಸರು | **ವೀರಪ್ಪ** |
| ವಯಸ್ಸು | **49** |
| ಉದ್ಯೋಗ | ವ್ಯವಸಾಯ |
| ವಿಳಾಸ | **ಅರಳೀಕಟ್ಟೆದೊಡ್ಡಿ** |

**ದಿನಾಂಕಃ 22.01.2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸ 1 ರಿಂದ 4 ಮತ್ತು 6 ರವರು ಪರಿಚಯ ಇರುತ್ತಾರೆ. ಆರೋಪಿಗಳು ಪರಿಚಯ ಇರುತ್ತಾರೆ.

ಈಗ ಸಾಕ್ಷಿಗೆ ನಿಪಿ-02 ನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಾನು ಮನೆಯ ಹತ್ತಿರ ಹೋಗಿದ್ದಾಗ ಆರೋಪಿಗಳು ಮತ್ತು ಚಾಸಾ 1 ರವರು ಗಲಾಟೆಯನ್ನು ಮಾಡುತ್ತಿದ್ದರು. ಚಾಸಾ 1 ರವರು ದೂರನ್ನು ಕೊಟ್ಟಿದ್ದರಂತೆ ಆಗ ಪೋಲಿಸರು 3.00 ಗಂಟೆಗೆ ಬಂದು ಚಾಸಾ 1 ರವರ ಮನೆಯ ಹತ್ತಿರ ಮಹಜರನ್ನು 3.00 ರಿಂದ 3.30 ಗಂಟೆಯವರೆಗೆ ಜರುಗಿಸಿರುತ್ತಾರೆ. ಮಹಜರ್ ಸಮಯದಲ್ಲಿ ನಾನು ಮತ್ತು ಚಾಸಾ 6 ರವರು ಇದ್ದೆವು. ಮಹಜರ್ ಸಮಯದಲ್ಲಿ ಚಾಸಾ 1 ರವರು ಗೊದಮೊಟ್ಟೆಯನ್ನು ಪೋಲಿಸರಿಗೆ ಕೊಟ್ಟಿದ್ದು ಪೋಲಿಸರು ಅದನ್ನು ತೆಗೆದುಕೊಂಡಿರುತ್ತಾರೆ. ಸದರಿ ಗೊದಮೊಟ್ಟೆಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಮುದ್ದೆಮಾಲು 1 ಅನ್ನು ತೋರಿಸಲಾಗಿ ನೋಡಿ ಗುರುತಿಸಿರುತ್ತಾರೆ. ದಿನಾಂಕ 27.09.2023 ರಂದು ಮಹಜರನ್ನು ಜರುಗಿಸಿರುತ್ತಾರೆ.

**ಪಾಟೀ ಸವಾಲು ಃ- ಶ್ರೀ. ಹೆಚ್ ಎನ್ ಎಸ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಅರಳೀಕಟ್ಟೆ ದೊಡ್ಡಿಯಲ್ಲಿ ನೀವು ಹುಟ್ಟಿದಾಗಿನಿಂದ ವಾಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅರಳೀಕಟ್ಟೆದೊಡ್ಡಿಯಿಂದ ಬೆಳಗವಾಡಿ ಗ್ರಾಮಕ್ಕೆ ಎಷ್ಟು ದೂರ ಎಂದರೆ ಸಾಕ್ಷಿ 1 - 1 1/2 ಕಿ.ಮೀ. ಎಂದು ನುಡಿಯುತ್ತಾರೆ. ಚಾಸಾ 1 ಮತ್ತು ಆರೋಪಿಗಳ ನಡುವೆ ಸದರಿ ಬೆಳಗವಾಡಿ ಗ್ರಾಮದ ಸರ್ವೆ ನಂ.19ರ 4 ಎಕರೆ ಜಮೀನಿಗೆ ಸಿವಿಲ್ ವ್ಯಾಜ್ಯ ನಡೆಯುತ್ತಿದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮಗೆ ಓದಲು ಮತ್ತು ಬರೆಯಲು ಬರುತ್ತದೆಯೆ ಎಂದರೆ ಸಾಕ್ಷಿ ಬರುತ್ತದೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂ.19ರ 4 ಎಕರೆ ಜಮೀನು ನರಸಯ್ಯ ಬಿನ್ ಮೋಟಯ್ಯ, ಬೋರಯ್ಯ ಬಿನ್ ಮೋಟಯ್ಯ , ನಿಂಗಯ್ಯ ಬಿನ್ ಮೋಟಯ್ಯ ಮತ್ತು ಕೆಂಪಯ್ಯ ಬಿನ್ ಮೋಟಯ್ಯ ರವರ ಹೆಸರಿಗೆ ಜಂಟಿ ಖಾತೆ ಇದೆ ಎಂದರೆ ಸಾಕ್ಷಿ ಇದೆ ಎಂದು ಹೇಳುತ್ತಾರೆ ಆದರೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾ 1 ರವರ ತಂದೆ ಸದರಿ ಕೆಂಪಯ್ಯ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ 1ರವರೆ ಅಸಲುದಾವೆ ನಂ.337/2022 ರಂತೆ ದಾವೆ ಸಲ್ಲಿಸಿ ನಡೆಸುತ್ತಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತ ಪ್ರಕರಣ ಆಗುವ ಮೊದಲೇ ಸದರಿ ಅಸಲು ದಾವೆ ನಡೆಯುತ್ತಿತ್ತು ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಪೋಲಿಸರು ಮಹಜರ್ಗೆ ಹಾಜರಾಗಲು ನೋಟೀಸ್ ಕೊಟ್ಟಿದ್ದರ ಎಂದರೆ ಸಾಕ್ಷಿ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಯಾವಾಗ ನೋಟೀಸ್ ಕೊಟ್ಟಿದ್ದರು ಎಂದರೆ ಸಾಕ್ಷಿ 10.00ಗಂಟೆಗೆ ನೋಟಿಸ್ ಕೊಟ್ಟು 3.00 ಗಂಟೆಗೆ ಮಹಜರ್ ಗೆ ಬರುತ್ತೇವೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಗಲಾಟೆ ಯಾವಾಗ ಆಗಿರುತ್ತದೆ ಎಂದು ನಿಮಗೆ ನಿರ್ಧಿಷ್ಟವಾಗಿ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪೋಲಿಸ್ ಠಾಣೆಗೆ ಯಾವಾಗ ಬಂದಿರುತೀರಿ ಎಂದರೆ ಸಾಕ್ಷಿ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಮಹಜರ್ ಸಮಯದಲ್ಲಿ ಯಾರು ಯಾರು ಇದ್ದರು ಎಂದರೆ ಸಾಕ್ಷಿ ನಾನು, ಚಾಸಾ1 ಮತ್ತು 6 ರವರು ಎಂದು ನುಡಿಯುತ್ತಾರೆ. ನಿಪಿ-2 ರಲ್ಲಿ ಏನು ಬರೆದಿದೆ ಎಂದು ನಿಮಗೆ ನಿರ್ಧಿಷ್ಟವಾಗಿ ಗೊತ್ತಿರುವುದಿಲ್ಲ ಎಂದರೆ

ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-2 ರಲ್ಲಿ ಏನು ಚೆಕ್ಕುಬಂಧಿ ಬರೆದಿದೆ ಎಂದೂ ಸಹ ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮುದ್ದೆಮಾಲು 1 ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ 1 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ ಹೇಳುತ್ತಿದ್ದೀರಿ ಎಂದೆರ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಗೊದಮೊಟ್ಟೆ ಸುಮಾರು 2 ಮಾರು ಉದ್ದ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಹುಟ್ಟಿದ ದಿನಾಂಕ ಗೊತ್ತೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪೋಲಿಸರು ಸ್ಥಳಕ್ಕೆ ಬಂದು ಮಹಜರ್ ಮಾಡಿರುವುದಿಲ್ಲ ಹಾಗೂ ನೀವು ಸ್ಥಳದಲ್ಲಿ ಇದ್ದಿರಲಿಲ್ಲ ಹಾಗೂ ನಿಮ್ಮ ಸಮಕ್ಷಮ ಯಾವುದೇ ವಸ್ತುವನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ ಚಾಸ 1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**

**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 43 / 2024**

**ಚಾಸಾ ಃ- 06 / ಪ್ರಾಸಾ ಃ- 06**

| | |
|---|---|
| ಹೆಸರು | **ವಿಷಕಂಠಯ್ಯ** |
| ತಂದೆಯ ಹೆಸರು | **ಗಂಗನಂಜಯ್ಯ** |
| ವಯಸ್ಸು | **55** |
| ಉದ್ಯೋಗ | ವ್ಯವಸಾಯ |
| ವಿಳಾಸ | **ಎಸ್ ಬ್ಯಾಡರಹಳ್ಳಿ** |

**ದಿನಾಂಕಃ 22.01.2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸ 1 ರಿಂದ 5 ರವರು ಪರಿಚಯ ಇರುತ್ತಾರೆ. ಆರೋಪಿಗಳು ಪರಿಚಯ ಇರುತ್ತಾರೆ. ಈಗ ಸಾಕ್ಷಿಗೆ ನಿಪಿ-02 ನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ದಿನಾಂಕ 27.09.2023 ರಂದು ಸದರಿ ಸಹಿಯನ್ನು ನಾನು ಜಮೀನಿನ ವಿಚಾರಕ್ಕಾಗಿ ಗಲಾಟೆ ಮಾಡಿದ ರಸ್ತೆಯಲ್ಲಿ 3.00 ಗಂಟೆಗೆ ಪೋಲಿಸರು ಬಂದು ಮಹಜರ್ ಜರುಗಿಸಿದಾಗ ಹಾಕಿರುತ್ತೇನೆ. ಮಹಜರ್ ಸಮಯದಲ್ಲಿ ಚಾಸ 1 ರವರು ಗೊದಮೊಟ್ಟೆಯನ್ನು ಪೋಲಿಸರಿಗೆ ಕೊಟ್ಟಿದ್ದು ಪೋಲಿಸರು ಅದನ್ನು ತೆಗೆದುಕೊಂಡಿರುತ್ತಾರೆ. ಸದರಿ ಗೊದಮೊಟ್ಟೆಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಮುದ್ದೆಮಾಲು 1 ಅನ್ನು ತೋರಿಸಲಾಗಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಃ- ಶ್ರೀ. ಹೆಚ್ ಎನ್ ಎಸ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ನೀವು ಚಾಸಾ 1 ರವರ ಸಂಬಂಧಿಕರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪೋಲಿಸರು ನಿಮಗೆ ಮೊದಲೇ ಬಂದು ನೋಟಿಸ್ ಕೊಟ್ಟಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಯಾವಾಗ ಗಲಾಟೆ ಆಗಿರುತ್ತದೆ ಎಂದು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು

ನುಡಿಯುತ್ತಾರೆ. ಪೋಲಿಸರು ಮಹಜರ್ ನಲ್ಲಿ ಏನು ಬರೆದಿರುತ್ತಾರೆ ಎಂದು ನಿಮಗೆ ನಿರ್ಧಿಷ್ಟವಾಗಿ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಮುದ್ದೆಮಾಲು 1 ಸಾಮಾನ್ಯವಾಗಿ ಹಳ್ಳಿ ಕಡೆ ಸಿಗುತ್ತವೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಇಂಥಹ ಗೊದಮೊಟ್ಟೆಯಿಂದ ಹಲ್ಲೆ ಮಾಡಿರುತ್ತಾರೆ ಎಂದು ನಿಮಗೆ ನಿರ್ಧಿಷ್ಟವಾಗಿ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ ಮುದ್ದೆಮಾಲು 1 ನ್ನು ಕೊಟ್ಟಿದ್ದರು ಎಂದು ನುಡಿಯುತ್ತಾರೆ. ನೀವು ಹೇಳುವಂತೆ ಗಲಾಟೆ ಆಗಿರುತ್ತದೆ ಎಂದು ಹೇಳುವ ಸಮಯದಲ್ಲಿ ಇಂಥಹ ಗೊದಮೊಟ್ಟೆ ಯಿಂದ ಹಲ್ಲೆ ಮಾಡಿರುತ್ತಾರೆ ಎಂದು ನಿರ್ಧಿಷ್ಟವಾಗಿ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನಡಿಯುತ್ತಾರೆ.

ಪ್ರಸ್ತುತ ಪ್ರಕರಣವನ್ನು ದಾಖಲಿಸುವ ಮೊದಲು ಚಾಸಾ 1 ಮತ್ತು 2 ರವರು ಆರೋಪಿಗಳ ವಿರುದ್ದ ಸಿವಿಲ್ ವ್ಯಾಜ್ಯ ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪ್ರಸ್ತುತ ಪ್ರಕರಣವನ್ನು ದಾಖಲಿಸುವ ಮೊದಲಿನಿಂದಲೂ ಆರೋಪಿಗಳು ಮತ್ತು ಚಾಸಾ 1 ಮತ್ತು 2 ರವರಿಗೆ ಮಾತುಕತೆ ಇರುವುದಿಲ್ಲ ಎಂದರೆ ಸಾಕ್ಷಿ ಅದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯತ್ತಾರೆ. ನಿಮ್ಮ ಊರಿನಿಂದ ಬ್ಯಾಡರಹಳ್ಳಿಗೆ ಎಷ್ಟು ಕಿ.ಮೀ. ಎಂದರೆ ಸಾಕ್ಷಿ 2 ಕಿ.ಮೀ. ಎಂದು ನುಡಿಯುತ್ತಾರೆ. ಚಾಸ1 ರವರು ನಿಮ್ಮ ಸಂಬಂಧಿಕರಾದ ಕಾರಣ ಅವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪೋಲಿಸಲು ಯಾವುದೇ ಸ್ಥಳಕ್ಕೆ ಬಂದಿರುವುದಿಲ್ಲ ಹಾಗೂ ಯಾವುದೇ ಮಹಜರನ್ನು ಜರುಗಿಸಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತ್ರಾರೆ. ಮುದ್ದೆ ಮಾಲು 1 ಅನ್ನು ಈ ಕೇಸಿಗೋಸ್ಕರ ಸೃಷ್ಟಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಮುದ್ದೆಮಾಲು 1 ರಿಂದ ಯಾವುದೇ ವ್ಯಕ್ತಿಗೆ ಹೊಡೆದರೆ ಮುಕ್ಕಾಗುತ್ತದೆ ಎಂದರೆ ಸಾಕ್ಷಿ ಆಗುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**